ಸರಿಯಾಗಬೇಕು, ಭೂಮಿಗೆ ಭಾರವಾಗದಂತೆ, ನಾಕು ಜನ ಒಪ್ಪುವಂತೆ ಬದುಕಬೇಕು!' ಎಂದುಕೊಂಡರು. ಮುಂದಿನ ಚಣಕ್ಕಾಗಲೇ, 'ಸರಿಯಾಗುವುದು ಎಂದರೇನು?' ಎಂಬ ಪ್ರಶ್ನೆ ಎದುರಾಯಿತು. ಮೊನ್ನೆ ತಾನೇ ಅಮೆರಿಕದ 'ಮ್ಯಾನ್ ಆಫ್ ದಿ ಯಿಯರ್' ಇಂಟರ್‌ನ್ಯಾಷನಲ್ ಪ್ರಶಸ್ತಿ ಪಡೆದ ತಾನು ಈ ಪ್ರಶ್ನೆಗೆ ಉತ್ತರ ತಿಳಿಯದಷ್ಟು ದೂರ ಸಾಗಿ ಬಂದಿರಬಹುದೇ? ತಾನಿನ್ನು ಸರಿಯಾಗುವುದು ಸಾಧ್ಯವೇ ಇಲ್ಲವೇ? ಈ ಥರದ ಕೆಟ್ಟ ಅನುಮಾನಗಳು ಮೂಡತೊಡಗಿದವು. ಇವತ್ತು ಮತ್ತೆ ಆ ಹಾಳಾದ ಸ್ವಾಮಿ ಕನಸಿಗೆ ಬಂದಾನು ಎಂದು ದಿಗಿಲಾಗಿ, ರಾತ್ರಿಯೆಲ್ಲ ಟೀವಿಯಲ್ಲಿ ಸಿನಿಮಾ ಗಿನಿಮಾ ನೋಡುತ್ತಾ ಎದ್ದೇ ಇರಬೇಕೆಂದು ತೀರ್ಮಾನಿಸಿದರು.

ಇಂಥ ಮೂಡಿನಲ್ಲಿ ಕಾಲೆಳೆಯುತ್ತಾ ಹಾಗೂ ಹೀಗೂ ವಾಕಿಂಗ್ ಮುಗಿಸಿ ಡೆಹರಾಡೂನಿನ ಗೆಸ್ಟ್ ಹೌಸಿನಲ್ಲಿ ಒಬ್ಬರೇ ಅಬ್ಬೇಪಾರಿಯ ಹಾಗೆ ಬಿದ್ದುಕೊಂಡಿದ್ದ ರುದ್ರಣ್ಣನವರ ಹೋದ ಜೀವವನ್ನು ಮರಳಿ ತರುವ ಹಾಗೆ ಬೆಳಬೆಳಗ್ಗೇ ಮಹಿಳೆಯೊಬ್ಬಳು ಬಂದು, ಆ ಸಂಜೆಯ ಅಧ್ಯಾತ್ಮ ಗೋಷ್ಠಿಯಲ್ಲಿ ರುದ್ರಣ್ಣನವರು ದಯವಿಟ್ಟು ಏನಾದರೂ ಮಾತಾಡಲೇಬೇಕೆಂದು ಕೇಳಿಕೊಂಡ ಪವಾಡವೂ ನಡೆದುಹೋಯಿತು; ರುದ್ರಣ್ಣನವರ ನರನಾಡಿಗಳಲ್ಲಿ ನವಜೀವ ಸಂಚಾರವಾದಂತಾಯಿತು.

